ಅ. ತುರುವೇಕೆರೆ ತಾಲ್ಲೂಕು ಬುಗುಡನ ಹಳ್ಳಿ ಗ್ರಾಮ ಬಹಳ ಕೆಳಮಟ್ಟದಲ್ಲಿದ್ದು, ಹೇಮಾವತಿ ನೀರು ಹರಿಯುವಾಗ ಜನರು ಓಡಾಡಲು ತೊಂದರೆಯಾಗಿದ್ದು, ಇದನ್ನು ತಪ್ಪಿಸಲು ಅಲ್ಲಿನ ಸೇತುವೆ ಹಾಗೂ ರಸ್ತೆ ಸುಮಾರು 3-4 ಅಡಿ ಎತ್ತರಿಸಲು ಸರ್ಕಾರ ಯೋಚಿಸಿದೆಯೇ;

ಆ. ಸುಮಾರು ವರ್ಷಗಳಿಂದ ತೊಂದರೆಗೀಡಾದ ಬುಗುಡನಹಳ್ಳಿ ಹಾಗೂ ಅರಕೆರೆ ಗ್ರಾಮಸ್ಥರಿಗೆ (ಸುಮಾರು 200 ಕುಟುಂಬಗಳು) ಎಂದು ಅನುಕೂಲ ಮಾಡಿಕೊಡಲಾಗುವುದು.

ಇ. ಪ್ರಸಕ್ತ ಸಾಲಿನಲ್ಲಿ ಜನರ ಅನುಕೂಲಕ್ಕಾಗಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೇ?

ಶ್ರೀ ಎಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಮಂತ್ರಿಗಳು):

ಅ. ಸದರಿ ರಸ್ತೆಯು ಈ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಈ ರಸ್ತೆ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವುದು. ಆದರೆ ಈ ರಸ್ತೆಯು ಹೇಮಾವತಿ ನಾಲಾ ಅಚ್ಚುಕಟ್ಟಿನಲ್ಲಿ ಬರುವುದರಿಂದ ನಾಲೆ ಬಸಿ ನೀರಿನಿಂದ ಹಾನಿಯಾಗಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು, ಸದರಿ ರಸ್ತೆಯನ್ನು ದುರಸ್ಥಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆ. ಈ ರಸ್ತೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಜಲ ಸಂಪನ್ಮೂಲ ಇಲಾಖೆಗೆ ವಹಿಸಿಕೊಂಡು ನಂತರ ಕ್ರಮ ಕೈಗೊಳ್ಳಲಾಗುವುದು.

ಇ. ಈ ಸಾಲಿನಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಹಾಬಲ ದೇವಸ್ಥಾನ ಟ್ರಸ್ಟಿಗಳಿಂದ ಅವ್ಯವಸ್ಥೆ

1672(1953)

ಶ್ರೀ ಮೋಹನ ಕೆ.ಶೆಟ್ಟ (ಕುಮಟಾ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ದಕ್ಷಿಣ ಕಾಶಿ ಎಂದೇ ಪುರಾಣ ಪ್ರಸಿದ್ಧವಾದ ಕುಮಟಾ ತಾಲ್ಲೂಕಿನ ಗೋಕರ್ಣ

ಶ್ರೀ ಮಹಾಬಲ ದೇವಸ್ಥಾನದ ಟ್ರಸ್ಟಿಗಳಿಂದ ಅವ್ಯವಸ್ಥೆ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

2. ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಸರಕಾರ ಕೈಗೊಂಡ ಕ್ರಮಗಳೇನು?

3. ಈ ದೇವಸ್ಥಾನವು ಕರ್ನಾಟಕ ರಾಜ್ಯ ಚಾರಿಟಬಲ್ ಟ್ರಸ್ಟ್ ನಿಯಮದಡಿ ಇದುವರೆಗೂ ನೋಂದಣಿಯಾಗದಿರಲು ಕಾರಣಗಳೇನು;

4. ಈ ದೇವಸ್ಥಾನಕ್ಕೆ ಅತೀ ಹೆಚ್ಚಿನ ಉತ್ಪನ್ನವಿರುವುದರಿಂದ ತಿರುಪತಿ - ತಿರುಮಲ ದೇವಸ್ಥಾನ ಅಥವಾ ಸವದತ್ತಿ ಯಲ್ಲಮ್ಮ ದೇವಸ್ಥಾನ ಟ್ರಸ್ಟ್ ಮಾದರಿಯಲ್ಲಿ ನಡೆಸಲಾಗುವುದೇ?

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು):

1. ಈ ಬಗ್ಗೆ ಉಪಾಧಿವಂತ ಮಂಡಳಿ ಗೋಕರ್ಣ ಇವರು ಆಡಳಿತ ಅವ್ಯವಸ್ಥೆಯ ಬಗ್ಗೆ ದೂರಿದ್ದಾರೆ.

2. ಈ ಬಗ್ಗೆ ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತವೆ.

3. ಶ್ರೀ ಮಹಾಬಳೇಶ್ವರ ಬಿ.ಪಿ.ಟಿ. ಕಾಯ್ದೆ 1950ರ ಪ್ರಕಾರ ಎ 540 (ಕಾರವಾರ) ಕ್ರಮಾಂಕದಲ್ಲಿ ನೋಂದಣಿಯಾಗಿರುತ್ತದೆ.

4. ಬಿ.ಪಿ.ಟಿ. ಕಾಯ್ದೆ 1950 ಇದು ಈ ವಿಭಾಗದಲ್ಲಿ ಜಾರಿಯಲ್ಲಿರುವುದರಿಂದ ತಿರುಪತಿ - ತಿರುಮಲ ಅಥವಾ ಸೌಂದತ್ತಿ ಯಲ್ಲಮ್ಮ ದೇವಸ್ಥಾನದ ಟ್ರಸ್ಟ್ ಮಾದರಿಯಲ್ಲಿ ನಡೆಸಲು ಸದ್ಯಕ್ಕೆ ಅವಕಾಶವಿರುವುದಿಲ್ಲ.

ಕಾರವಾರ ವಿಧಾನ ಸಭಾ ಕ್ಷೇತ್ರಕ್ಕೆ ಚುನಾವಣೆ ನಡೆಸುವುದು.

1673(1948)

ಶ್ರೀ ಮೋಹನ್ ಕೆ.ಶೆಟ್ಟಿ (ಕುಮಟಾ): ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರಾದ ಶ್ರೀ ವಸಂತ ಆಸ್ನೋಟಿಕರ ಆಕಸ್ಮಿಕ ಮರಣ ಹೊಂದಿ ಒಂದು ವರ್ಷಕ್ಕಿಂತಲೂ ಹೆಚ್ಚು